JULY 19, 2025

# AKASHAVANI - DHARWAD

# PRADESH SAMACHARA (KANNADA) 7.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣೆ ಉದ್ದಿಮೆ: ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ, ಸಹಕಾರಿ.**
- **ಭಾರತೀಯ ಕಾಫಿ ಮಂಡಳಿ: 2047ರ ವೇಳೆಗೆ, ಏಳು ಲಕ್ಷ ಟನ್ ಕಾಫಿ ಉತ್ಪಾದಿಸುವ ಗುರಿ.**
- **'ಒಂದು ಜಿಲ್ಲೆ, ಒಂದು ತಾಣ': ಟ್ರಿಪಲ್ ಪಿ ಮಾದರಿಯಲ್ಲಿ, ರಾಜ್ಯದ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಚಾಲನೆ.**
- **ರಾಜ್ಯದ ಕರಾವಳಿ ಹಾಗೂ ಮಲೆನಾಡಿನಲ್ಲಿ, ಮುಂದುವರಿದ ಮಳೆ.**

<><><>

**ಈಗ ವಾರ್ತೆಗಳ ವಿವರ**

<><><>

**ಆತ್ಮ ನಿರ್ಭರ ಭಾರತ: ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ – ಪಿ.ಎಂ.ಎಫ್.ಎಮ್.ಇ. ಯಿಂದ, ನಗರ ಹಾಗೂ ಗ್ರಾಮೀಣ ಭಾಗದ, ಸಣ್ಣ ಉದ್ದಿಮೆದಾರರಿಗೆ ಅನುಕೂಲವಾಗಿದೆ ಎಂದು, ಯೋಜನೆಯ ಫಲಾನುಭವಿ, ಧಾರವಾಡದ ವಿದ್ಯಾಶ್ರೀ ಕುಲಕರ್ಣಿ ತಿಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ..**

<><><>

**ಧ್ವನಿ: ವಿದ್ಯಾಶ್ರೀ ಕುಲಕರ್ಣಿ 47 ಸೆಕೆಂದುಗಳು**

<><><>

ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆ, ಸಬ್ಸಿಡಿ ಸಹಿತ ಸಾಲ ಸೌಲಭ್ಯ ಒದಗಿಸುತ್ತಿದೆ; ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿದೆ ಎಂದು, ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಹೇಳಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಪಿ.ಎಫ್.ಎಂ.ಇ ಯೋಜನೆ ಪಾಲುದಾರರ, ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು.

<><><>

ದೇಶದಲ್ಲೇ ವಿನೂತನ ಮಾದರಿಯ, 'ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ', ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಅನುಷ್ಠಾನಗೊಂ ಡಿದ್ದು, ಅಸಂಘಟಿತ 91 ವಲಯದ ಕಾರ್ಮಿಕರಿಗೆ, ಅನುಕೂಲವಾಗಲಿದೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋ ’ ಲಾಡ್ ತಿಳಿಸಿದ್ದಾರೆ. ಕೊಪ್ಪಳ ಜಿಲ್ಲೆಯ, ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ, ಸ್ಮಾರ್ಟ್ ಕಾರ್ಡ್ ವಿತರಿಸಿ, ವಿವಿಧ ಯೋಜನೆಗಳ ಕುರಿತ ಅರಿವು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

<><><>

ಬಳಿಕ ಸಚಿವ ಸಂತೋಷ ಲಾಡ ಅವರು, ಗದಗ ನಗರದ ಸ್ವಾಮಿ ವಿವೇಕಾನಂದ ಭವನದಲ್ಲಿ, ಅಸಂಘಟಿತ ವಲಯದ ಕಾರ್ಮಿಕರಿಗೆ, ಸ್ಮಾರ್ಟ್ ಕಾರ್ಡ್ ವಿತರಿಸಿದರು.

<><><>

ಕಾರ್ಮಿಕ ಇಲಾಖೆಯ, ಪ್ರಾದೇಶಿಕ ನಿರ್ದೇಶಕ, ಮನೋಜ ಕುಮಾರ, ಬೆಂಗಳೂರಿನಲ್ಲಿ ಮಾತನಾಡಿ, ಕಾರ್ಮಿಕರ ರಾಜ್ಯ ವಿಮಾ ನಿಗಮ, ಸಾಮಾಜಿಕ ಭದ್ರತಾ ವ್ಯಾಪ್ತಿ ವಿಸ್ತರಿಸುವ, Scheme for promotion of Registration of employers and employees - SPREE 20’25, ಅಡಿ, ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿ ಉತ್ತೇಜಿಸುವ ಯೋಜನೆ ಜಾರಿಗೊಂಡಿದೆ ಎಂದರು. ಬೆಂಗಳೂರಿನ, ಕಾರ್ಮಿಕರ ಕಲ್ಯಾಣ ಮಂಡಳಿಯ, ಸಿ.ಇ.ಓ. ಡಿ.ಭಾರತಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ, ಹೆಸರು ನೋಂದಾಯಿಸಿದ, ಕಾರ್ಮಿಕ ಫಲಾನುಭವಿ ಮರಣ ಹೊಂದಿದಲ್ಲಿ, ಅಂತ್ಯಕ್ರಿಯೆಗೆ ಹಾಗೂ ಸಹಾಯ ಧನವನ್ನು 1 ಲಕ್ಷದ 50 ಸಾವಿರ ರೂಪಾಯಿಗೆ ಹೆಚ್ಚಿಸಲಾಗಿದೆ ಎಂದು, ತಿಳಿಸಿದ್ದಾರೆ.

<><><>

2047ರ ವೇಳೆಗೆ, ಏಳು ಲಕ್ಷ ಟನ್ ಕಾಫಿ ಉತ್ಪಾದಿಸುವ ಗುರಿ, ಭಾರತೀಯ ಕಾಫಿ ಮಂಡಳಿ ಹೊಂದಿದೆ ಎಂದು, ಮಂಡಳಿಯ ಅಧ್ಯಕ್ಷ, ಎಂ.ಜೆ.ದಿನೇಶಕುಮಾರ ತಿಳಿಸಿದ್ದಾರೆ. ಚಿಕ್ಕಮಗಳೂರಿನಲ್ಲಿ, ಬಾಳೆಹೊನ್ನೂರು ಕೇಂದ್ರೀಯ ಕಾಫಿ ಸಂಶೋಧನಾ ಸಂಸ್ಥೆಯ ಶತಮಾನೋತ್ಸವ ಲಾಂಛನ ಅನಾವರಣಗೊಳಿಸಿ, ಕಾಫಿ ಯಾತ್ರಾ, ವಸ್ತು ಪ್ರದರ್ಶನ ಉದ್ಘಾಟಿಸಿ, ಮಾತನಾಡಿದರು. ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಕಾಫಿ ಬೆಳೆಯನ್ನು, ಸರ್ಫೈಸಿ ಕಾಯ್ದೆಯಿಂದ ಹೊರಗಿಡುವ ಬಗ್ಗೆ, ಸಂಸತ್ತಿನಲ್ಲಿ ಚರ್ಚಿಸಲಾಗಿದೆ. ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್, ಬ್ಯಾಂಕ್‌ಗಳು ಬಲವಂತದ ಸಾಲ ವಸೂಲಾತಿ ನಿಲ್ಲಿಸಿ, ಆರು ತಿಂಗಳ ಕಾಲಕ್ಕೆ ವಿಸ್ತರಿಸಿ, ಏಕಕಾಲಕ್ಕೆ ಸಾಲ ತೀರುವಳಿಗೆ, ಅನುಕೂಲ ಕಲ್ಪಿಸಿದ್ದಾರೆ ಎಂದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ, ರಾಜ್ಯ ಸರ್ಕಾರದ, ಎರಡು ವರ್ಷಗಳ ಸಾಧನಾ ಸಮಾವೇಶ, ಇಂದು ಮೈಸೂರು ಮಹಾರಾಜ ಕಾಲೇಜಿನ ಮೈದಾನದಲ್ಲಿ, ಜರುಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಸಾಧನಾ ಸಮಾವೇಶ, ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯ ಸರ್ಕಾರದ ಕೆಲಸಗಳನ್ನು, ಜನರ ಮುಂದಿಡುವ ಪ್ರಯತ್ನ. ಪಂಚ ಖಾತ್ರಿ ಯೋಜನೆಗಳಿಂದ, ಬಡವರ ಆರ್ಥಿಕ ಸಬಲೀಕರಣ ಸಾಧ್ಯವಾಗಿದೆ. ವಿವಿಧ ಅಭಿವೃದ್ಧಿ ಯೋಜನೆಗಳಿಗೆ, ಹಣಕಾಸಿನ ಕೊರತೆ ಇಲ್ಲ ಎಂಬುದನ್ನು, ನಾಡಿನ ಜನತೆಗೆ ತಿಳಿಸಲು, ಆಯೋಜಿಸಲಾಗಿದೆ ಎಂದರು.

<><><>

ಈ ಪ್ರಕಟಣೆ ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಕೊಡಗು ಜಿಲ್ಲೆಯ, ಮಾಂದಲಪಟ್ಟಿ ಪ್ರವಾಸಿ ತಾಣವನ್ನು, ಒಂದು ಜಿಲ್ಲೆ, ಒಂದು ತಾಣ ಯೋಜನೆಯಡಿ, ಆಯ್ಕೆ ಮಾಡಲಾಗಿದೆ; 50 ಲಕ್ಷ ರೂಪಾಯಿ ವೆಚ್ಚದಲ್ಲಿ ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು, ಕೊಡಗು ಜಿಲ್ಲೆ ಉಪ ನಿರ್ದೇಶಕಿ ಅನಿತಾ ಭಾಸ್ಕರ್ ತಿಳಿಸಿದ್ದಾರೆ. ಮಡಿಕೇರಿಯಲ್ಲಿ ಮಾತನಾಡಿದ ಅವರು, ಪ್ರಸಕ್ತ ವರ್ಷ, ಕೊಡಗು ಜಿಲ್ಲೆಗೆ 10 ಲಕ್ಷದ 50 ಸಾವಿರ ಜನ, ಪ್ರವಾಸಿಗರು ಭೇಟಿ ನೀಡಿದ್ದಾರೆ ಎಂದರು. 'ಟ್ರಿಪಲ್ ಪಿ' ಮಾದರಿಯಲ್ಲಿ, 'ಒಂದು ಜಿಲ್ಲೆ, ಒಂದು ತಾಣ' ಯೋಜನೆ ಅಡಿ, ರಾಜ್ಯದ ಪ್ರವಾಸಿ ತಾಣಗಳನ್ನು, ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು, ಅವರು ಹೇಳಿದರು.

<><><>

ಬೀದರ ಜಿಲ್ಲೆ ವಿವಿಧ ಪ್ರವಾಸಿ ತಾಣಗಳ ವೀಕ್ಷಣೆಗೆ, ನೂತನ ಬಸ್ ಸೇವೆಗೆ, ಇಂದು ಬೆಳಗ್ಗೆ 11 ಗಂಟೆಗೆ, ಬೀದರ್ ಕೋಟೆಯಿಂದ, ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ಚಾಲನೆ ನೀಡಲಿದೆ.

<><><>

ಬೆಳಗಾವಿ ಜಿಲ್ಲೆಗೆ, 300 ಹೊಸ ಬಸ್‌ಗಳನ್ನು ನೀಡಲಾಗುತ್ತಿದ್ದು, ಅವುಗಳಲ್ಲಿ 100 ಇಲೆಕ್ಟ್ರಿಕ್ ಬಸ್ ಸೇರಿವೆ ಎಂದು, ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಬೆಳಗಾವಿಯಲ್ಲಿ, ವಿಭಾಗೀಯ ಜಂಟಿ ಸಾರಿಗೆ ಆಯುಕ್ತರ, ನೂತನ ಕಚೇರಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹೊಸ ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯದ ಎಲ್ಲ ಜಿಲ್ಲೆಗಳಿಗೆ, ಮಾಲಿನ್ಯರಹಿತ, ಪರಿಸರ ಸ್ನೇಹಿ, ಇಲೆಕ್ಟ್ರಿಕ್ ನಗರ ಸಾರಿಗೆ ಬಸ್ ಗಳನ್ನು ಒದಗಿಸಲಾಗುತ್ತಿದೆ ಎಂದರು. ಕೇಂದ್ರ ಹಾಗೂ ರಾಜ್ಯ ಸರ್ಕಾರ, ಶೇಕಡ 50 ಸಹಭಾಗಿತ್ವದಲ್ಲಿ, ನಗರ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ ಎಂದು, ಸಚಿವರು ತಿಳಿಸಿದರು.

<><><>

'ಜಿಯಾಲಾಜಿಕಲ್ ಸೊಸೈಟಿ ಆಫ್ ಇಂಡಿಯಾ' ಉಪಾಧ್ಯಕ್ಷರಾಗಿದ್ದ, ಹೆಸರಾಂತ ಭೂ ವಿಜ್ಞಾನಿ ಬಿ.ಮಹಾಬಲೇಶ್ವರ ರಾವ್, ಬೆಂಗಳೂರಿನ ಹೊಸಕೆರೆ ಹಳ್ಳಿಯಲ್ಲಿ, ನಿನ್ನೆ ನಿಧನರಾದರು. ಅವರಿಗೆ 83 ವರ್ಷ ವಯಸ್ಸಾಗಿತ್ತು.

ಬೆಂಗಳೂರು ವಿಶ್ವವಿದ್ಯಾಲಯದ, ಸ್ನಾತಕೋತ್ತರ ಭೂ ವಿಜ್ಞಾನ ವಿಭಾಗದಲ್ಲಿ, ಉಪನ್ಯಾಸಕರಾಗಿ ಸೇವೆ ಆರಂಭಿಸಿದ ಪ್ರೊಫೆಸರ್ ರಾವ್, 35 ವರ್ಷಗಳ ಕಾಲ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಬ್ರಿಟನ್, ಫ್ರಾನ್ಸ್, ಜರ್ಮನಿ, ಜಪಾನ್ ಸೇರಿದಂತೆ, ಅಂತಾರಾಷ್ಟ್ರೀಯ ಭೂ ವಿಜ್ಞಾನಿಗಳೊಂದಿಗೆ, ಗಮನಾರ್ಹ ಕೆಲಸ ಮಾಡಿದ ಹಿರಿಮೆ, ಅವರದ್ದು. ಪ್ರೊಫೆಸರ್ ಬಿ.ಮಹಾಬಲೇಶ್ವರ ರಾವ್, ಅವರ ನಿಧನಕ್ಕೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ನಿರಂತರ ಮಳೆ ಹಿನ್ನೆಲೆ, ದಕ್ಷಿಣಕನ್ನಡ ಜಿಲ್ಲೆಯಾದ್ಯಂತ, 30ಕ್ಕೂ ಹೆಚ್ಚು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಮಂಗಳೂರು ನಗರದ ವಿವಿಧೆಡೆ ಕೃತಕ ನೆರೆ ಸೃಷ್ಟಿಯಾಗಿದೆ. ನಿರೀಕ್ಷಣಾ ಮಂದಿರದ ಬಳಿ, ಗುಡ್ಡ ಕುಸಿದು, ಸಂಚಾರಕ್ಕೆ ತಡೆಯುಂಟಾಗಿದೆ. ಉತ್ತರಕನ್ನಡ ಜಿಲ್ಲೆ, ಕೆಲ ತಾಲೂಕುಗಳಲ್ಲಿ ಮಳೆ ಮುಂದುವರಿದಿದ್ದು, ಮೂರು ಮನೆಗಳು ಕುಸಿದಿವೆ. ಚಿಕ್ಕಮಗಳೂರು ಜಿಲ್ಲೆ, ಕೈಮರ, ಮಲ್ಲೇನಹಳ್ಳಿ, ಲಕ್ಯ, ಹುಕ್ಕುಂದ, ಹಿರೇಕೊಳಲೆ, ವಸ್ತಾರೆಯಲ್ಲಿ, ಹೆಚ್ಚಿನ ಮಳೆಯಾಗಿದೆ. ಪ್ರವಾಸಿ ತಾಣಗಳಾದ ಮುಳ್ಳಯ್ಯನಗಿರಿ, ಕೆಮ್ಮಣ್ಣುಗುಂಡಿ, ಚಾರ್ಮಾಡಿ ಘಾಟ್‌ನಲ್ಲಿ, ಮಂಜು ಮುಸುಕಿದ ವಾತಾವರಣವಿದ್ದು, ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸುವಂತೆ ಜಿಲ್ಲಾಡಳಿತ ಸೂಚಿಸಿದೆ.

<><><>

ಅಂತಾರಾಷ್ಟ್ರೀಯ ಚಂದ್ರ ದಿನದ ಹಿನ್ನೆಲೆ, ಇಂದಿನಿಂದ 22ರ ವರೆಗೆ, ಕಲಬುರಗಿ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ, ಶಾಲಾ ಮಕ್ಕಳಿಗಾಗಿ, ವಿವಿಧ ಸ್ಪರ್ಧೆ ಹಾಗೂ ಆಕಾಶಕಾಯ ವೀಕ್ಷಣೆ ಕುರಿತ, ಚಲನಚಿತ್ರ ಪ್ರದರ್ಶನ ಆಯೋಜಿಸಲಾಗಿದೆ.

<><><>

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಸೋಮಣ್ಣ ಬೇವಿನಮರದ, ಇಂದು ಕಲಬುರಗಿಗೆ ಭೇಟಿ ನೀಡಲಿದ್ದಾರೆ. ವಿವಿಧ ಕನ್ನಡ ಶಾಲೆಗಳಲ್ಲಿ, ಪ್ರಾಧಿಕಾರದ ಅನುದಾನದಲ್ಲಿ ಕೈಗೊಳ್ಳಲಾದ ಕಾಮಗಾರಿಗಳನ್ನು, ಪರಿಶೀಲಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣೆ ಉದ್ದಿಮೆ; ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ, ಸಹಕಾರಿ.

ಭಾರತೀಯ ಕಾಫಿ ಮಂಡಳಿ; 2047ರ ವೇಳೆಗೆ, ಏಳು ಲಕ್ಷ ಟನ್ ಕಾಫಿ ಉತ್ಪಾದಿಸುವ ಗುರಿ.

'ಒಂದು ಜಿಲ್ಲೆ, ಒಂದು ತಾಣ'; ಟ್ರಿಪಲ್ ಪಿ ಮಾದರಿಯಲ್ಲಿ, ರಾಜ್ಯದ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಚಾಲನೆ.

ರಾಜ್ಯದ ಕರಾವಳಿ ಹಾಗೂ ಮಲೆನಾಡಿನಲ್ಲಿ, ಮುಂದುವರಿದ ಮಳೆ.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>